**ಸಿ.ಸಿ . ನಂಃ 661/2022**

**ಪಿ.ಡಬ್ಲ್ಯೂಃ 1**

ದಿನಾಂಕಃ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್. ಆರ್. ಎ. ವಕೀಲರಿಂದಃ –**

ನಾನು ಖಾಸಗಿ ನವಚೇತನ ಫೈನಾನ್ಸನಲ್ಲಿ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಬೆಳಿಗ್ಗೆ 8-00 ರಿಂದ 6-00 ಗಂಟೆಯವರೆಗೆ ಕೆಲಸ ಮಾಡುತ್ತೇನೆ. ಸುಮಾರು 4 ವರ್ಷಗಳಿಂದ ಆರೋಪಿ ಪರಿಚಯವಿರುತ್ತಾರೆ. ಯಾವ ದಿನಾಂಕದಿಂದ ಪರಿಚಯವಾಗಿರುತ್ತಾರೆಂದು ನಿರ್ಧಿಷ್ಟವಾಗಿ ಹೇಳಲಾಗುವುದಿಲ್ಲ. ಆರೋಪಿಯ ಕುಟುಂಬದ ಬಗ್ಗೆ ನನಗೆ ತಿಳಿದಿಲ್ಲ. ಆರೋಪಿಯು ಶಿಗ್ಗಾಂವ ತಾಲೂಕಿನ ಹನುಮರಹಳ್ಳಿಯವರು. ಅವರು ನಮ್ಮ ಕಚೇರಿಯ ಕೆಳಗಿನ ಮಳಿಗೆಯಲ್ಲಿ ಬಟ್ಟೆ ಅಂಗಡಿ ಹೊಂದಿದ್ದರು ಹಾಗೂ ನಮ್ಮ ಕಚೇರಿಯಲ್ಲಿ ಸಾಲ ಪಡೆದುಕೊಂಡಿದ್ದರಿಂದ ಪರಿಚಯವಾಗಿದ್ದರು. ಯಾವ ವರ್ಷ ಸಾಲ ಪಡೆದುಕೊಂಡಿದ್ದರು ಎಂದು ನನಗೆ ನೆನಪಿಲ್ಲ. ದ್ವಿ ಚಕ್ರ ವಾಹನದ ಸಾಲ ಪಡೆದುಕೊಂಡಿದ್ದರು. ಸಾಕ್ಷಿದಾರರು ಮುಂದುವರೆದು ಅಂದಾಜು 2018 ರಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ದ್ವಿ ಚಕ್ರ ವಾಹನದ ಸಾಲವನ್ನು ಮರುಪಾವತಿ ಮಾಡಿರುತ್ತಾರೆ.

2. ಆರೋಪಿಯು ಸುಮಾರು 5 ಸಾರಿ ನನ್ನ ಬಳಿ ಸಾಲ ಪಡೆದುಕೊಂಡಿರುತ್ತಾರೆ. ರೂ.2000 - 5000/-, 10,000 - 15,000/-, 20,000 - 25,000/- ಗಳಂತೆ ಸಾಲ ಪಡೆದುಕೊಂಡಿರುತ್ತಾರೆ. ಒಂದು – ಎರಡು ವಾರಗಳೊಳಗೆ ಮರು ಪಾವತಿ ಮಾಡಿರುತ್ತಾರೆ. 2021ರ ಡಿಸೆಂಬರ್ ಕೊನೆಯ ವಾರದಲ್ಲಿ ಆರೋಪಿಯು **ರೂ.5,00,000/-** ಗಳ ಸಾಲ ಕೇಳಿರುತ್ತಾರೆ. ಅದೇ ದಿನ ಹಣ ಕೊಟ್ಟಿರುತ್ತೇನೆ. ಸಾಕ್ಷಿದಾರರು ಮುಂದುವರೆದು 2 ದಿನವಾದ ನಂತರ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ದಿನಾಂಕ ನೆನಪಿಲ್ಲ. ಸದರಿ ಹಣವನ್ನು ಬಸನಗೌಡ ಸುತ್ತಕೋಟಿ ಎಂಬುವವರ ಸಮಕ್ಷಮ ಆರೋಪಿಯ ಅಂಗಡಿಯಲ್ಲಿ ಮಧ್ಯಾಹ್ನ 12-00 ಗಂಟೆ ಸುಮಾರಿಗೆ ಕೊಟ್ಟಿರುತ್ತೇನೆ. ಬಸನಗೌಡ ಸುತ್ತಕೋಟಿ ರವರನ್ನು ನಾನೇ ಕರೆದುಕೊಂಡು ಹೋಗಿದ್ದೆ. ರೂ.500 ಮುಖ ಬೆಲೆಯ ನೋಟುಗಳಲ್ಲಿ ಕೊಟ್ಟಿರುತ್ತೇನೆ. 2-3 ದಿನಗಳಲ್ಲಿ ಹೊಂದಿಸಿ ಕೊಟ್ಟಿರುತ್ತೇನೆ. ನನ್ನ ಸಂಬಳ ಹಾಗೂ ಕೃಷಿಯಲ್ಲಿ ಬಂದ ಆದಾಯದ ಹಣದಲ್ಲಿ ಕೊಟ್ಟಿರುತ್ತೇನೆ. ನಾನು ಡಿಗ್ರಿ ಓದಿರುತ್ತೇನೆ.

**ಸಿ.ಸಿ . ನಂಃ 661/2022**

**ಪಿ.ಡಬ್ಲ್ಯೂಃ 1**

3. ನಾನು ಸುಮಾರು 10-15 ವರ್ಷಗಳಿಂದ ಹಿರೇಕೆರೂರಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಆರೋಪಿಯು ಕೆನರಾ ಬ್ಯಾಂಕನಲ್ಲಿ ಖಾತೆ ಹೊಂದಿದ್ದು, ಎಷ್ಟು ವರ್ಷಗಳಿಂದ ಖಾತೆ ಹೊಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ತೆರಿಗೆ ಪಾವತಿದಾರನಲ್ಲ. ನನ್ನ ಕೆಲಸದಿಂದ ವಾರ್ಷಿಕ ರೂ.2,00,000/- ಗಳು ಹಾಗೂ ಕೃಷಿಯಿಂದ **5 - 6 ಲಕ್ಷ** ಆದಾಯ ಹೊಂದಿರುತ್ತೇನೆ. ಆರೋಪಿಯೇ 3 ತಿಂಗಳೊಳಗಾಗಿ ವಾಪಸ್ಸು ಕೊಡುವುದಾಗಿ ಒಪ್ಪಿರುತ್ತಾನೆ.

4. ಹಣ ವಾಪಸ್ಸು ಕೊಡುವಂತೆ ಏಪ್ರಿಲ್-2022 ರಲ್ಲಿ ಕೇಳಿರುತ್ತೇನೆ. ದಿನಾಂಕ ನೆನಪಿರುವುದಿಲ್ಲ. ವಾರಕ್ಕೊಮ್ಮೆ ಹಾಗೂ ತಿಂಗಳಿಗೊಮ್ಮೆ 2-3 ಸಾರಿ ಕೇಳಿರುತ್ತೇನೆ. ಕೊನೆಯದಾಗಿ ಮೇ ತಿಂಗಳಲ್ಲಿ ಕೇಳಿರುತ್ತೇನೆ. 1-2 ಸಾರಿ ಬಸನಗೌಡ ಸುತ್ತಕೋಟಿರವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಕೇಳಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆ.ನ್ಯಾ.ದಲ್ಲಿ ಬೆ. ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ.ಹೇ.ಕೆ.ಸರಿ ಇದೆ. ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು